ಸಭೆಯಲ್ಲಿ ಸಿ.ಓ.ಡಿ, ತನಿಖೆ ನಡೆಸಲು ಸರ್ಕಾರವನ್ನು ಕೋರುವ ನಿರ್ಣಯ ತೆಗೆದುಕೊಳ್ಳಲಾಗಿದೆ. ಅದರಂತೆ ಸರ್ಕಾರವು ಈ ಕಾರ್ಖಾನೆಯಲ್ಲಿ ನಡೆದಿರಬಹುದು ಎನ್ನಲಾದ ಅವ್ಯವಹಾರಗಳನ್ನು ಕೂಲಂಕುಶವಾಗಿ ತನಿಖೆ ನಡೆಸಿ ವರದಿ ನೀಡಲು ಸಿ.ಓ.ಡಿ, ಅವರಿಗೆ ವಹಿಸುವ ವಿಚಾರವು ಸರ್ಕಾರದ ತೀವ್ರ ಪರಿಶೀಲನೆಯಲ್ಲಿ ಇದೆ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ಪರಿಶೀಲನೆಯಲ್ಲಿದೆ ಎಂದು ಮಾನ್ಯ ಮಂತ್ರಿಗಳು ಹೇಳಿದರು. ಎರಡು ತಾಲ್ಲೂಕುಗಳ ರೈತರ ಬದುಕಿನ ಪ್ರಶ್ನೆ, ಬಹಳ ಮುಖ್ಯವಾದುದು.

ಅಧ್ಯಕ್ಷರು: ಇದು ಆಡಳಿತ ವ್ಯವಸ್ಥೆಯ ಭಾಷೆ. ಅಷ್ಟು ಹೇಳಿದರೆ ಸಿಓಡಿ ತನಿಖೆಗೆ ಒಪ್ಪಿಸುತ್ತಾರೆ ಎಂದರ್ಥ.

**ಐ) ಹುಬ್ಬಳ್ಳಿ ನಗರದಲ್ಲಿರುವ ಮೈಸೂರು ಕಿರ್ಲೋಸ್ಕರ್ ಫ್ಯಾಕ್ಟರಿ ಕುರಿತು.**

ಶ್ರೀ ಜಗದೀಶ್ ಶೆಟ್ಟರ್(ಹುಬ್ಬಳ್ಳಿ ಗ್ರಾಮಾಂತರ): ಮಾನ್ಯ ಅಧ್ಯಕ್ಷರೆ, ಹುಬ್ಬಳ್ಳಿ ನಗರದಲ್ಲಿದ್ದಂತಹ ಮೈಸೂರ್ ಕಿರ್ಲೋಸ್ಕರ್ ಫ್ಯಾಕ್ಟರಿ ದೊಡ್ಡ ಫ್ಯಾಕ್ಟರಿ. ಇದರಲ್ಲಿಮೂರು ಸಾವಿರ ಜನ ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ. ಮೈಸೂರ್ ಕಿರ್ಲೋಸ್ಕರ್ ಕಾರ್ಖಾನೆ ಹುಬ್ಬಳ್ಳಿಯಲ್ಲಿ ಇದ್ದಂತಹುದು. ಆದರೆ ಇದನ್ನು ಕೇಂದ್ರ ಕಛೇರಿಯಾದಂತಹ ಹರಿಹರಕ್ಕೆ ಸ್ಥಳಾಂತರ ಮಾಡುತ್ತಾರೆಂಬ ಸುದ್ದಿ ಈ ನಗರದಲ್ಲಿದೆ. ಈ ರೀತಿ ಸ್ಥಳಾಂತರವಾದರೆ ಒಂದು ದೊಡ್ಡ ಫ್ಯಾಕ್ಟರಿಯಲ್ಲಿ ಕೆಲಸ ಮಾಡುವಂತಹ 3,000ಜನ ನಿರುದ್ಯೋಗಿಗಳು ಆಗುತ್ತಿದ್ದಾರೆ. ಪಾಲಂಟರಿ ರಿಟ್ರೆಂಮೆಂಟ್ ತೆಗೆದುಕೊಳ್ಳಬೇಕೆಂದು ಈಗಾಗಲೇ ಫ್ಯಾಕ್ಟರಿಯವರು ಒತ್ತಾಯ ಮಾಡುತ್ತಿದ್ದಾರೆ. ಮತ್ತು ಅಷ್ಟೇ ಅಲ್ಲ ಆ ಫ್ಯಾಕ್ಟರಿ ಮೇಲೆ ಡಿಪೆಂಡ್ ಆಗಿ ಕೆಲಸ ಮಾಡುವಂತಹ ನೂರಾರು ಸಣ್ಣ ಉದ್ದಿಮೆಗಳು ಸಹ ಬಂದ್ ಆಗಿ ಸಾವಿರಾರು ಜನ ನಿರುದ್ಯೋಗಿಗಳಾಗುವ ಪ್ರಸಂಗ ಇದೆ. ದಯವಿಟ್ಟು ಸರ್ಕಾರದವರು ಇದಕ್ಕೆ ಯಾವುದೇ ರೀತಿಯ ಒತ್ತಾಯ ತಂದು ಇದು ಸ್ಥಳಾಂತರ ಆಗದ ರೀತಿಯಲ್ಲಿ ಮತ್ತು ಹುಬ್ಬಳ್ಳಿಯಲ್ಲಿನ ಕಾರ್ಮಿಕರಿಗೆ ಅನ್ಯಾಯ ಆಗದ ರೀತಿಯಲ್ಲಿ ಸರ್ಕಾರ ಏನಾದರೂ ಕ್ರಮವನ್ನು ತೆಗೆದುಕೊಳ್ಳಬೇಕು, ಅದರ ಮೇಲೆ ಒತ್ತಾಯ ತರಬೇಕು ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ.

ಶ್ರೀ ಎಂ.ಸಿ.ನಾಣಯ್ಯ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಕೈಗಾರಿಕಾ ಮಂತ್ರಿಗಳ ಗಮನಕ್ಕೆ ಈ ವಿಚಾರವನ್ನು ತರುತ್ತೇನೆ. ಈಗ ಬರೇ ಸುದ್ದಿ ಮಾತ್ರ. ಏನೂ ವಿಚಾರ ನಡೆದಿಲ್ಲ. ಆದರೆ ಅಲ್ಲಿರತಕ್ಕ ಪರಿಸ್ಥಿತಿ ಏನು ಎಂಬ ಬಗ್ಗೆ ಮಾಹಿತಿಯನ್ನು ತರಿಸುತ್ತೇವೆ. ಅಲ್ಲಿ ಘಟಕ ಸ್ಥಳಾಂತರವಾದರೆ ಅಲ್ಲಿರತಕ್ಕಂಥ ವರ್ಕರ್ಸನ್ನು ಸ್ಥಳಾಂತರ ಮಾಡುವುದಕ್ಕೆ ಆಗುವುದಿಲ್ಲ

ಎಂದು ಗೊತ್ತಿದೆ. ಇದರ ಬಗ್ಗೆ ಮಾನ್ಯ ಕೈಗಾರಿಕಾ ಮಂತ್ರಿಗಳ ಜೊತೆ ಚರ್ಚೆ ಮಾಡಿ ಮಾಹಿತಿಯನ್ನು ತರಿಸಿ ನಿಮಗೆ ಉತ್ತರವನ್ನು ಕೊಡುತ್ತೇನೆ.

**ಐ) ಎಸ್.ಎಸ್.ಎಲ್.ಸಿ. ಬೋರ್ಡಿನಲ್ಲಿ ಉತ್ತರ ಪತ್ರಿಕೆಯ ಮೌಲ್ಯಮಾಪನ ಕಾರ್ಯ ಸರಿಯಾಗಿ ನಡೆಯದಿರುವ ಬಗ್ಗೆ.**

+ಶ್ರೀ ಎಸ್.ಸುರೇಶ್ ಕುಮಾರ್ (ರಾಜಾಜಿನಗರ): ಸನ್ಮಾನ್ಯ ಸಭಾಧ್ಯಕ್ಷರೆ, ಎಸ್.ಎಸ್.ಎಲ್.ಸಿ ಬೋರ್ಡಿನ ಒಂದು ನಿರ್ಲಕ್ಷ್ಯತನ ಹಾಗೂ ಎಸ್.ಎಸ್.ಎಲ್.ಸಿಯ ಉತ್ತರಪತ್ರಿಕೆಯ ಮೌಲ್ಯಮಾಪನ ಏನು ಮಾಡುತ್ತಾರೆ? ಅವರ ಬೇಜವಾಬ್ದಾರಿಯ ಒಂದು ಘಟನೆಯ ಬಗ್ಗೆ ಮಾನ್ಯ ಸಚಿವರ ಗಮನಕ್ಕೆ ತಮ್ಮ ಮುಖಾಂತರ ತರುತ್ತಿದ್ದೇನೆ. ಇವರ ಬೇಜವಾಬ್ದಾರಿ ಮತ್ತು ನಿರ್ಲಕ್ಷ್ಯತನದಿಂದ ಒಬ್ಬ ಪ್ರತಿಭಾನ್ವಿತ ವಿದ್ಯಾರ್ಥಿಯ ಜೀವನ ಇವತ್ತು ಹಾಳಾಯಿತು. ಬೆಂಗಳೂರು ಹೈಸ್ಕೂಲ್‌ನಲ್ಲಿ ಒಬ್ಬ ವಿಶಾಖ್ ಎಂಬಂತಹ ಪ್ರತಿಭಾನ್ವಿತ ವಿದ್ಯಾರ್ಥಿ. ಅವನಿಗೆ ಗಣಿತ ಪತ್ರಿಕೆಯಲ್ಲಿ ಬಂದಂತಹ ಮಾರ್ಕ್ಸ್ ವಿಚಾರ. ತಮಗೂ ಗೊತ್ತು ಮ್ಯಾಥ್‌ಮ್ಯಾಟಿಕ್ಸ್‌ನಲ್ಲಿ 100ಕ್ಕೆ 99 ಕೊಡಬಹುದು, 100ಕ್ಕೆ 100 ಅಂಕ ಬರುವಂತಹ ಪತ್ರಿಕೆ. ಉತ್ತರ ಸರಿ ಇದ್ದರೆ ಪೂರ್ತಿ ಅಂಕ ಬರಬೇಕು. ಆದರೆ ಆತನಿಗೆ 40 ಅಂಕ ಬಂತು. He was expecting more than 95. He got 40 marks only. ಈಗ ನೀವೊಂದು ಹೊಸ ಯೋಜನೆಯನ್ನು ಇಂಟ್ರಡ್ಯೂಸ್ ಮಾಡಿದ್ದೀರಿ. ನಾನು ಉತ್ತರ ಪತ್ರಿಕೆಯ ಜೆರಾಕ್ಸ್ ಅನ್ನು ತೆಗೆದುಕೊಳ್ಳಬಹುದು. ಅವನು ಜೆರಾಕ್ಸ್ ಕಾಪಿ ತೆಗೆದುಕೊಂಡ. ತೆಗೆದುಕೊಂಡು ನೋಡಿದ. ಗಾಬರಿ ಆಯಿತು. 15 ನೇ ಪ್ರಶ್ನೆ ಆದ ಮೇಲೆ ಯಾವುದೇ ಉತ್ತರಕ್ಕೆ ಅಂಕವನ್ನೆ ಕೊಟ್ಟಿಲ್ಲ. ಈ ಉತ್ತರ ಪತ್ರಿಕೆಯನ್ನು ಆತ ತೆಗೆದುಕೊಂಡು ಹೋಗಿ ಬೇರೆ ಬೇರೆ ಮೌಲ್ಯ ಮಾಪನ ಮಾಡಿದಂತಹ ಗಣಿತದ ಟೀಚರ್ಸ್‌ಗೆ ತೋರಿಸಿದಾಗ ಅವರೆಲ್ಲರದೂ ಒಮ್ಮತದ ಅಭಿಪ್ರಾಯವೆಂದರೆ ಈತನಿಗೆ ಕನಿಷ್ಟ 99 ಅಂಕ ಬರಬೇಕು ಎಂದು. ಇವನು ಎಸ್.ಎಸ್.ಎಲ್.ಸಿ ಬೋರ್ಡಿಗೆ ಹೋದ. ಎಸ್.ಎಸ್.ಎಲ್.ಸಿ ಬೋರ್ಡ್‌ನವರು ರೀ ವಾಲ್ಯುಯೇಷನ್‌ಗೆ ಹಾಕಪ್ಪ ಎಂದರು. ರೀ ವಾಲ್ಯುಯೇಷನ್ ರಿಸಲ್ಟ್ ಇದುವರೆಗೂ ಕೂಡ ಬಂದಿಲ್ಲ. ಅವನಿಗೇನೋ ತಾನು ಎಲೆಕ್ಟ್ರಾನಿಕ್ಸ್ ಇಂಜಿನಿಯರ್ ಆಗಬೇಕೆಂದು ಕನಸು ಇತ್ತು. ರಿಸಲ್ಟ್ ಬಂದಿಲ್ಲ. ಇದನ್ನು ಮತ್ತೆ ತೆಗೆದುಕೊಂಡು ಹೋಗಿ ಕೊಟ್ಟಾಗ ನಾವು ಮತ್ತೆ ಎನ್‌ಕ್ವೈರಿ ಮಾಡುತ್ತೇವೆ ಎಂದು ಹೇಳುತ್ತಾರೆ. ಈ ತರಹ ಸುಮಾರು ಐದು ಸಾವಿರ ರೀ ವಾಲ್ಯುಯೇಷನ್‌ಗೆ ಅರ್ಜಿಗಳು ಕಾದಿವೆ. ರೀಟೋಟಲಿಂಗ್ ಅರ್ಜಿಗಳು ಇದೆ. ಪ್ರಶ್ನೆ ಪತ್ರಿಕೆನ್ನು ತೋರಿಸಿ ರಿಸಲ್ಟ್‌ಗೆ ಅರ್ಜಿ ಕೊಟ್ಟಿದ್ದಾರೆ, ಅದರ ಫಲಿತಾಂಶ ಕೂಡ ಬಂದಿಲ್ಲ. ಸುಮಾರು ಐದು ಸಾವಿರ ಅರ್ಜಿಗಳು ಈ ರೀತಿ ಇದೆ. ನಾನು ತಮ್ಮ ಮುಖಾಂತರ